**ಕರ್ನಾಟಕ ವಿಧಾನ ಪರಿಷತ್ತು**

**ನೂರ ಇಪ್ಪತ್ತೆರಡನೆಯ ಅಧಿವೇಶನ**

**ಲಘು ಪ್ರಕಟಣೆ ಭಾಗ - 2**

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಗುರುವಾರ, ದಿನಾಂಕ: 23ನೇ ಮೇ, 2013**

**ಸಂಖ್ಯೆ: 24**

**ವಿಧಾನ ಪರಿಷತ್ತಿನ ಅಧಿವೇಶನದ ಪ್ರಾರಂಭದಲ್ಲಿ ರಾಜ್ಯಪಾಲರ ಭಾಷಣ ಮತ್ತು ವಿಧಾನ ಪರಿಷತ್ತಿನ ಉಪವೇಶನಗಳು ನಡೆಯುವ ಸ್ಥಳ**

ಭಾರತ ಸಂವಿಧಾನದ 176ನೆಯ ಅನುಚ್ಛೇದದ (1)ನೆಯ ಖಂಡದಲ್ಲಿ ವಿಧಾಯಕವಾಗಿರುವಂತೆ ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನ ಸಭಾ ಸಭಾಂಗಣದಲ್ಲಿ 2013ನೇ ಇಸವಿ **ಜೂನ್, 03ನೇ ಸೋಮವಾರ ಬೆಳಿಗ್ಗೆ 11.00 ಗಂಟೆಗೆ** ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡುತ್ತಾರೆಂಬುದನ್ನು ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಸಲಾಗಿದೆ.

ಘನತೆವೆತ್ತ ರಾಜ್ಯಪಾಲರು ಭಾಷಣವನ್ನು ಮುಕ್ತಾಯಗೊಳಿಸಿ ಸಭಾಂಗಣದಿಂದ ತೆರಳಿದ ನಂತರ ಸದಸ್ಯರು ನಿರ್ಗಮಿಸುತ್ತಾರೆ. ಜಂಟಿ ಅಧಿವೇಶನವು ಮುಕ್ತಾಯಗೊಂಡ ಕೂಡಲೇ ವಿಧಾನ ಪರಿಷತ್ತು ಪುನ: ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಸಭೆ ಸೇರುತ್ತದೆ.

**03ನೇ ಜೂನ್, 2013ನೆಯ ಸೋಮವಾರ ಕರ್ನಾಟಕ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡುವ ಸಂದರ್ಭದಲ್ಲಿ ಅನುಸರಿಸಬೇಕಾದ ವಿಧಾನ:-**

ಘನತೆವೆತ್ತ ರಾಜ್ಯಪಾಲರು **ಬೆಳಿಗ್ಗೆ 10.55 ಗಂಟೆಗೆ** ವಿಧಾನಸೌಧದ ಮಹಾದ್ವಾರದ ಮೆಟ್ಟಿಲುಗಳ ಬಳಿಗೆ ಆಗಮಿಸುವರು. ತಮ್ಮ ಕಾರಿನಿಂದ ಇಳಿದ ಬಳಿಕ ಘನತೆವೆತ್ತ ರಾಜ್ಯಪಾಲರನ್ನು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ಮತ್ತು ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರು, ವಿಧಾನ ಪರಿಷತ್ತಿನ ಮತ್ತು ವಿಧಾನ ಸಭೆಯ ಕಾರ್ಯದರ್ಶಿಗಳು ಸ್ವಾಗತಿಸಿ, ಮಹಾದ್ವಾರದಿಂದ ಕರೆದುಕೊಂಡು ಬರುವರು. ಅಲ್ಲಿ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಗುವುದು.

| | | |
|---|---|---|
| **ಕಾರ್ಯದರ್ಶಿ ವಿಧಾನ ಸಭೆ** | | **ಕಾರ್ಯದರ್ಶಿ ವಿಧಾನ ಪರಿಷತ್ತು** |
| **ಮಾನ್ಯ ಸಭಾಧ್ಯಕ್ಷರು** | | **ಮಾನ್ಯ ಸಭಾಪತಿಯವರು** |
| **ಮಾನ್ಯ ಮುಖ್ಯ ಮಂತ್ರಿಗಳು** | **ಘನತೆವೆತ್ತ ರಾಜ್ಯಪಾಲರು** | **ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು** |
| | **ಎ.ಡಿ.ಸಿ** | |

..2..

ಈ ಮೆರವಣಿಗೆಯು ವಿಧಾನಸಭಾ ಸಭಾಂಗಣದ ಕಡೆಗೆ ತಿರುಗುವುದು. ವಿಧಾನಸಭಾ ಸಭಾಂಗಣದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ ಘನತೆವೆತ್ತ ರಾಜ್ಯಪಾಲರ ಆಗಮನವನ್ನು ಸಭೆಗೆ ದಂಡನಾಯಕರು ತಿಳಿಸುವರು. ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ ಮಾನ್ಯ ಸದಸ್ಯರುಗಳು ಎದ್ದು ನಿಂತುಕೊಂಡಿರಬೇಕೆಂದು ಕೋರಲಾಗಿದೆ. ಮೆರವಣಿಗೆಯು ವೇದಿಕೆಯ ಕಡೆ ಮುಂದುವರೆಯುವುದು. ಸಭಾಭವನದ ವೇದಿಕೆಯ ಮುಂದೆ ಬಂದ ಬಳಿಕ ಮೆರವಣಿಗೆಯು ವಿಭಾಗವಾಗುವುದು. ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮೇಲೆ ಬಂದು ತಮ್ಮ ಆಸನವನ್ನು ತಲುಪಿದ ಕೂಡಲೇ ರಾಷ್ಟ್ರಗೀತೆಯನ್ನು ನುಡಿಸಲಾಗುವುದು. **ವೇದಿಕೆಯ ಮೇಲೆ ಸಭಾಪತಿಯವರು ಘನತೆವೆತ್ತ ರಾಜ್ಯಪಾಲರ ಎಡಭಾಗದಲ್ಲಿಯೂ, ಸಭಾಧ್ಯಕ್ಷರು ಬಲಭಾಗದಲ್ಲಿಯೂ ಕುಳಿತುಕೊಳ್ಳುವರು.** ಘನತೆವೆತ್ತ ರಾಜ್ಯಪಾಲರು ಮಧ್ಯದಲ್ಲಿರುವ ಆಸನಗಳಲ್ಲಿ ಕುಳಿತುಕೊಳ್ಳುವರು. ಕಾರ್ಯದರ್ಶಿಗಳು ವೇದಿಕೆ ಮುಂದುಗಡೆ ಇರುವ ಆಸನಗಳಲ್ಲಿ ಕುಳಿತುಕೊಳ್ಳುವರು. **ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 26ರ ರೀತ್ಯಾ** "ರಾಜ್ಯಪಾಲರು ಬರುವಾಗ ಅಥವಾ ಹೊರಡುವಾಗ ಅಥವಾ ಅವರ ಭಾಷಣದ ಅವಧಿಯಲ್ಲಿ ಯಾರೇ ಸದಸ್ಯರು ಯಾವುದೇ ಭಾಷಣ ಮಾಡುವ ಮೂಲಕ ಅಥವಾ ಯಾವುದೇ ಕ್ರಿಯಾಲೋಪವೆತ್ತಿ ರಾಜ್ಯಪಾಲರ ಭಾಷಣಕ್ಕೆ ಮುಂಚೆಯಾಗಲಿ ಅಥವಾ ತರುವಾಯವಾಗಲಿ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಯನ್ನುಂಟು ಮಾಡತಕ್ಕುದ್ದಲ್ಲ ಅಥವಾ ವಿಘ್ನವನ್ನುಂಟು ಮಾಡತಕ್ಕುದ್ದಲ್ಲ ಮತ್ತು ಅಂಥ ಅಡ್ಡಿಯನ್ನು ಅಥವಾ ವಿಘ್ನವನ್ನು ಸದನದ ಆದೇಶದ ತೀವ್ರ ಉಲ್ಲಂಘನೆಯೆಂದು ಹಾಗೂ ರಾಜ್ಯಪಾಲರಿಗೆ ತೋರಿದ ಅಗೌರವವೆಂದು ಪರಿಗಣಿಸತಕ್ಕುದ್ದು ಮತ್ತು ಅಂಥ ಸದಸ್ಯ ಅಥವಾ ಸದಸ್ಯರನ್ನು ಸದನದಲ್ಲಿ ಮಂಡಿಸಬಹುದಾದ ಪ್ರಸ್ತಾವದ ಮೇರೆಗೆ ಅಧಿವೇಶನದ ಗೊತ್ತುಪಡಿಸಿದ ಅವಧಿಗೆ ಅಥವಾ ಉಳಿದ ಅವಧಿಗೆ ಅಮಾನತ್ತುಗೊಳಿಸತಕ್ಕದ್ದು".

ಭಾಷಣದ ನಂತರ ರಾಷ್ಟ್ರಗೀತೆಯನ್ನು ಪುನ: ನುಡಿಸಲಾಗುವುದು.

ಘನತೆವೆತ್ತ ರಾಜ್ಯಪಾಲರು ಮೆರವಣಿಗೆಯಲ್ಲಿ ಸಭಾಂಗಣವನ್ನು ಪ್ರವೇಶಿಸಿದ ರೀತಿಯಲ್ಲಿಯೇ ಸಭಾಂಗಣದಿಂದ ತೆರಳುವರು. ಮೆರವಣಿಗೆಯು ಮಹಾದ್ವಾರದ ಬಳಿ ಮುಕ್ತಾಯವಾಗುವುದು. ನಂತರ ಸಭಾಪತಿಯವರು, ಸಭಾಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಘನತೆವೆತ್ತ ರಾಜ್ಯಪಾಲರನ್ನು ಬೀಳ್ಕೊಡುವರು. ಘನತೆವೆತ್ತ ರಾಜ್ಯಪಾಲರು ಸಭಾಂಗಣದಿಂದ ಹೊರಗೆ ತೆರಳುವವರೆಗೆ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತಿರಬೇಕು.

## ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತಾ ಸೂಚನೆಯ ಪ್ರಸ್ತಾವ ಮತ್ತು ಅದಕ್ಕೆ ಸಂಬಂಧಿಸಿದ ತಿದ್ದುಪಡಿಗಳು

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಯ ನಿಯಮಗಳು 19 ಮತ್ತು 20ರಲ್ಲಿ ಸದಸ್ಯರೊಬ್ಬರು ಮತ್ತೊಬ್ಬ ಸದಸ್ಯರಿಂದ ಅನುಮೋದಿಸಲ್ಪಟ್ಟ **ಘನತೆವೆತ್ತ** ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತಾ ಸೂಚನೆಯ ಪ್ರಸ್ತಾವವನ್ನು ಮಂಡಿಸುವ ಅವಕಾಶವಿದೆ. ಆದುದರಿಂದ, **ಘನತೆವೆತ್ತ** ರಾಜ್ಯಪಾಲರು ಮಾಡಿದ ಭಾಷಣಕ್ಕಾಗಿ ಅವರಿಗೆ ಸಮರ್ಪಿಸುವ ಕೃತಜ್ಞತಾ ಸೂಚನೆಯ ಪ್ರಸ್ತಾವದ ಸೂಚನೆಯನ್ನು 2013ನೇ ಇಸವಿಯ ಜೂನ್, 3ನೇ ಸೋಮವಾರ ಮಧ್ಯಾಹ್ನ 3.00 ಗಂಟೆಯವರೆಗೂ ಮತ್ತು ಆ ಪ್ರಸ್ತಾವಕ್ಕೆ ಸಂಬಂಧಿಸಿದ ತಿದ್ದುಪಡಿಗಳ ಸೂಚನೆಯನ್ನು 2013ನೇ ಇಸವಿ ಜೂನ್, 4ರಂದು ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಯವರೆವಿಗೂ ಕೊಡಬಹುದೆಂದು ಮಾನ್ಯ ಸಭಾಪತಿಯವರು ಗೊತ್ತುಪಡಿಸಿದ್ದಾರೆ.

**ಪಿ. ಶ್ರೀಶ್**
ಕಾರ್ಯದರ್ಶಿ.

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

**www.kar.nic.in/kla**